ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ:ಸಚುಪ್ರಾ/ಚುನಾವಣೆ/ಜಿ.ಚು.ನೇ/ಅಪೆಕ್ಸ್/104/2014

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. ಕಟ್ಟಡ
ಬಿ.ಎಂ.ಟಿ.ಸಿ. 'ಎ' ಬ್ಲಾಕ್, ಶಾಂತಿನಗರ,
ಬೆಂಗಳೂರು-27.
ದಿನಾಂಕ: 18.03.2015

# ಸೇರ್ಪಡೆ ಆದೇಶ-1

ವಿಷಯ: 2015ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಪ್ರಾಧಿಕಾರದಿಂದ ಹೊರಡಿಸಿರುವ ಆದೇಶದ ಅನುಬಂಧ-1ಕ್ಕೆ ಸಂಬಂಧಿಸಿದಂತೆ ಸೇರ್ಪಡೆ ಆದೇಶ-1ನ್ನು ಹೊರಡಿಸುವ ಬಗ್ಗೆ.

ಉಲ್ಲೇಖ: 01. ಪ್ರಾಧಿಕಾರದಿಂದ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾದ ಆದೇಶದ **ಕ್ರಮಾಂಕ : ಸಚುಪ್ರಾ/ಚುನಾವಣೆ/ಜಿ.ಚು.ಅ/ಅಪೆಕ್ಸ್/ 104/2014 ದಿನಾಂಕ : 05.03.2015.**

02. ಪ್ರಾಧಿಕಾರದಿಂದ ಮಾಧ್ಯಮಿಕ/ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಹೊರಡಿಸಲಾದ **ಅಧಿಸೂಚನೆ ಸಂಖ್ಯೆ : ಸಚುಪ್ರಾ/ ಆಡಳಿತ/ಚುನಾವಣೆ/96/2014 ದಿನಾಂಕ : 05.03.2015.**

★★★★★

2015ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂಧ ಉಲ್ಲೇಖ(1)ರಂತೆ ಪ್ರಾಧಿಕಾರದಿಂದ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ (ಅಪೆಕ್ಸ್ ಸಹಕಾರ ಸಂಘಗಳು) ಪ್ರಾದೇಶಿಕ ಆಯುಕ್ತರು (Regional Commissioner) ಗಳನ್ನು ನೇಮಿಸಲಾಗಿತ್ತು. ಈ ಆದೇಶದಲ್ಲಿ ಹೊರಡಿಸಲಾಗಿದ್ದ ಅನುಬಂಧ-1ರಲ್ಲಿ 14 ಅಪೆಕ್ಸ್ ಸಂಘಗಳ ಪಟ್ಟಿಯನ್ನು ನೀಡಲಾಗಿದೆ.

ನಂತರದಲ್ಲಿ ಇನ್ನೂ 2 ಅಪೆಕ್ಸ್ ಸಂಘಗಳ ಆಡಳಿತ ಮಂಡಳಿಗಳ ಅವಧಿಯು ಮುಕ್ತಾಯಗೊಳ್ಳಲಿರುವುದಾಗಿ ತಡವಾಗಿ ತಿಳಿದು ಬಂದಿದ್ದು ಉಲ್ಲೇಖ(1) ಪ್ರಾಧಿಕಾರದ ಆದೇಶದ ಅನುಬಂಧ-1ಕ್ಕೆ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

**ಪ್ರಾಧಿಕಾರದ ಉಲ್ಲೇಖ(1)ರ ಆದೇಶಕ್ಕೆ ಸೇರಿದ ಅನುಬಂಧ-1ರಲ್ಲಿ ಬೆಂಗಳೂರು ಪ್ರಾಂತಕ್ಕೆ ಸಂಬಂಧಿಸಿದಂತೆ 14 ಅಪೆಕ್ಸ್ ಸಹಕಾರ ಸಂಘಗಳಿದ್ದು, 14ನೇ ಸಂಘವಾದ ನಂತರ 15ನೇ ಸಂಘವಾಗಿ ಕರ್ನಾಟಕ ರಾಜ್ಯ ದರ್ಜಿಗಳ ಸಹಕಾರ ಮಹಾಮಂಡಳ ನಿಯಮಿತ, ನಂ.69, ನೆಹರುನಗರ, ಸುಬೇದಾರ್ ಛತ್ರಂ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು**

.......2/-

ಮತ್ತು 16ನೇ ಸಂಘವಾಗಿ ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗದ ನೇಕಾರರ ಖಾದಿಯೇತರ ಸಹಕಾರ ಸಂಘಗಳ ಮಹಾಮಂಡಳ ನಿಯಮಿತ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ ಈ 2 ಅಪೆಕ್ಸ್ ಸಹಕಾರ ಸಂಘಗಳನ್ನು ಸೇರ್ಪಡೆ ಮಾಡಿ ಆದೇಶಿಸಿದೆ. ಈ 2 ಮಹಾಮಂಡಳಿಗಳಿಗೂ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ಜಿಲ್ಲಾ ಚುನಾವಣಾಧಿಕಾರಿಗಳಾಗಿರುತ್ತಾರೆಂದು ಆದೇಶಿಸಿದೆ. ಉಲ್ಲೇಖ(1)ರ ಆದೇಶದ ಅನುಬಂಧ-II ಮತ್ತು ಚೆಕ್‌ಲಿಸ್ಟ್‌ನಲ್ಲಿನ ಅಂಶಗಳು ಈ ತಿದ್ದುಪಡಿ ಆದೇಶದ ಮೂಲಕ ಹೊಸದಾಗಿ ಸೇರ್ಪಡೆಯಾದ ಕ್ರಮಸಂಖ್ಯೆ 15 ಮತ್ತು 16ರ ಮಹಾಮಂಡಳಿಗಳಿಗೂ ಅನ್ವಯವಾಗುತ್ತದೆಂದು ಈ ಮೂಲಕ ಆದೇಶಿಸಲಾಗಿದೆ.

ಪ್ರಾಧಿಕಾರದ ಆದೇಶದ ಮೇರೆಗೆ.

(ಬಿ.ಹೆಚ್.ಮಂಜಪ್ಪ)
ಕಾರ್ಯದರ್ಶಿ.

ಪ್ರತಿಗಳನ್ನು ಈ ಕೆಳಕಂಡವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

01. ಪ್ರಾದೇಶಿಕ ಆಯುಕ್ತರು (Regional Commissioner) ಬೆಂಗಳೂರು ಪ್ರಾಂತ, ಬೆಂಗಳೂರು.
02. ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
03. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1,ಆಲಿಆಸ್ಕರ್ ರಸ್ತೆ, ಬೆಂಗಳೂರು.
04. ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಪತ್ತು), (ಬಳಕೆ ಮತ್ತು ಮಾರಾಟ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.
05. ಸಹಕಾರ ಸಂಘಗಳ ಜಂಟಿನಿಬಂಧಕರು, (ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳು), (ಐಸಿಡಿಪಿ) ಮತ್ತು (ಕಾನೂನುಕೋಶ) ಕೇಂದ್ರ ಕಛೇರಿ, ಬೆಂಗಳೂರು.
06. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿನಿಬಂಧಕರುಗಳಿಗೆ.
07. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ.
08. ಸಹಕಾರ ಚುನಾವಣಾ ಪ್ರಾಧಿಕಾರದ ಸಹಕಾರ ಸಂಘಗಳ ಜಂಟಿನಿಬಂಧಕರು / ಉಪಕಾರ್ಯದರ್ಶಿ/ ಉಪನಿಬಂಧಕರು / ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರ್ಗಿ ಪ್ರಾಂತ / ಮೈಸೂರು ಪ್ರಾಂತ.
09. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ದರ್ಜಿಗಳ ಸಹಕಾರ ಮಹಾಮಂಡಳ ನಿಯಮಿತ, ನಂ.69, ನೆಹರುನಗರ, ಸುಬೇದಾರ್ ಛತ್ರಂ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು.
10. ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗದ ನೇಕಾರರ ಖಾದಿಯೇತರ ಸಹಕಾರ ಸಂಘಗಳ ಮಹಾಮಂಡಳ ನಿಯಮಿತ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
11. ಕಛೇರಿ ಆದೇಶ / ರಕ್ಷಾ ಕಡತಕ್ಕೆ.